ಪುನರ್ವಸತಿ ಕೇಂದ್ರಕ್ಕೆ ಸರ್ಕಾರಿ ಪ್ರೌಢಶಾಲೆ

122 (206) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಆಲಮಟ್ಟಿ ಅಣೆಕಟ್ಟೆಯ ಮುಳುಗಡೆ ಪುರ್ನವಸತಿ ಕೇಂದ್ರಗಳಲ್ಲಿ ಇರುವ ಪ್ರೌಢ ಶಾಲೆಗಳ ವಿವರ ನೀಡುವುದು

ಆ) ಸದರಿ ಸ್ಥಳಗಳಿಗೆ ಸರ್ಕಾರಿ ಪ್ರೌಢ ಶಾಲೆ ಮಂಜೂರು ಮಾಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ

ಇ) ಇದ್ದಲ್ಲಿ ಬೆಳ್ಳುಬ್ಬಿ, ದೇವರದೆಣ್ಣೂರ ಕೃಷ್ಣನಗರ, ಬಬಲಾದಿ ಪುನರ್ವಸತಿ ಕೇಂದ್ರಗಳಿಗೂ ಈ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲು ಉದ್ದೇಶಿಸಿದೆಯೇ,

ಈ) ಈ ಪ್ರಸ್ತಾವ ಯಾವ ಹಂತದಲ್ಲಿದೆ, ಯಾವಾಗ ಶಾಲೆಗಳನ್ನು ಮಂಜೂರು ಮಾಡಲಾಗುವುದು?

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 01 ಎಸ್ ಎಸ್ ಪದವಿ ಪೂರ್ವ ಕಾಲೇಜು

02 ಸಿಕ್ಕಾದ ಪ್ರೌಢ ಶಾಲೆ, ಕೋಲಾರ

03 ಸರ್ಕಾರಿ ಪ್ರೌಢ ಶಾಲೆ, ಬೇನಾಳ ಪುನರ್ವಸತಿ ಕೆಂದ್ರ

04 ಸರ್ಕಾರಿ ಪ್ರೌಢ ಶಾಲೆ ಸಿದ್ದನಾಧ ಪುನರ್ವಸತಿ ಕೆಂದ್ರ

05 ಬಳೂತಿ ಪುನರ್ವಸತಿ ಕೇಂದ್ರ

06 ಸರ್ಕಾರಿ ಪ್ರೌಢ ಶಾಲೆ, ಗಣಿ, ಪುನರ್ವಸತಿ ಕೆಂದ್ರ

ಆ) ಈಗಾಗಲೇ ಮೇಲ್ಕಂಡ ಶಾಲೆಗಳು ಪ್ರಾರಂಭವಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) 2003–2004ನೇ ಸಾಲಿಗೆ ಇವುಗಳಲ್ಲಿ ಕೃಷ್ಣಾನಗರ ಮತ್ತು ಬಳೂತಿ ಗ್ರಾಮಗಳಿಗೆ ಪ್ರೌಢ ಶಾಲೆ ಮಂಜೂರು ಮಾಡಲು ಉಪ ನಿರ್ದೇಶಕರಿಂದ ಪ್ರಸ್ತಾವನೆ ಬಂದಿದ್ದು, ದೇವರದೆಣ್ಣೂರ ಬಬಲಾದಿ ಪುನರ್ವಸತಿ ಕೇಂದ್ರಗಳಿಗೆ ಪ್ರೌಢ ಶಾಲೆ ಮಂಜೂರು ಮಾಡಲು ಪ್ರಸ್ತಾವನೆ ಬಂದಿರುವುದಿಲ್ಲ

ಈ) 2003–2004ನೇ ಸಾಲಿಗೆ ಇವುಗಳಲ್ಲಿ ಕೃಷ್ಣಾನಗರ ಮತ್ತು ಬಳೂತಿ ಗ್ರಾಮಗಳಿಗೆ ಮಾತ್ರ ಉಪ ನಿರ್ದೇಶಕರಿಂದ ಪ್ರಸ್ತಾವನೆ ಬಂದಿದ್ದು, ಇವುಗಳ ಪೈಕಿ ಬಳೂತಿ ಪುನರ್ವಸತಿ ಕೇಂದ್ರಕ್ಕೆ ಮಂಜೂರಾತಿ ನೀಡಿದೆ

ನಾಗಮಂಗಲದ ಮಾಯಗೋನಹಳ್ಳಿ ಸಾರ್ವಜನಿಕ ಗ್ರಂಥಾಲಯ

123 (118) ಶ್ರೀ ಚಲುವರಾಯ ಸ್ವಾಮಿ ಎನ್ (ನಾಗಮಂಗಲ) ಮಾನ್ಯ ವಯಸ್ಕರ ಶಿಕ್ಷಣ ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ಮಾಯಗೋನಹಳ್ಳಿ ಗ್ರಾಮ ಪಂಚಾಯಿತಿಗೆ ಗ್ರಂಥಾಲಯ ಯಾರ ಶಿಫಾರಸ್ಸಿನ ಮೇಲ ಮಂಜೂರಾಗಿದೆ

ಆ) ಇಲ್ಲಿನ ಮೇಲ್ವಿಚಾರಕರ ಹುದ್ದೆ ನೇಮಕಗೊಂಡಿದ್ದು ಯಾರ ಶಿಫಾರಸ್ಸಿನ ಮೇಲೆ ನಡೆದಿದೆ

ಇ) ಮೇಲ್ವಿಚಾರಕ ನೇಮಕಾತಿಗೆ ಸಂಬಂಧಿಸಿದಂತೆ ಸ್ಥಳೀಯ ಜನಪ್ರತಿನಿಧಿಗಳಿಗೆ ಮಾನ್ಯತೆ ಇಲ್ಲವೆ

ಈ) ಇದಕ್ಕೆ ಸರ್ಕಾರದ ಕ್ರಮವೇನು?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಸಂಬಂಧಿಸಿದ ಸ್ಥಳದ ಅಗತ್ಯತೆಯನ್ನು ಪರಿಗಣಿಸಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಮಂಜೂರು ಮಾಡಲಾಗುತ್ತಿದೆ

ಆ) ನಿಗದಿತ ಮಾರ್ಗಸೂಚಿ ಪ್ರಕಾರ ಗ್ರಂಥಾಲಯ ಇಲಾಖೆಯು ಮೇಲ್ವಿಚಾರಕರ ನೇಮಕಾತಿಯನ್ನು ಮಾಡುತ್ತಿದೆ

ಇ) ಮಾರ್ಗಸೂಚಿಗಳಲ್ಲಿ ಈ ಅಂಶವು ಒಳಗೊಂಡಿಲ್ಲ

ಈ) ಉದ್ಭವಿಸುವುದಿಲ್ಲ

ಶಿವಮೊಗ್ಗ ವಿಧಾನ ಸಭೆ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ ಹಾಗೂ ದುರಸ್ತಿ

130 (217) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 3ವರ್ಷದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಕಟ್ಟಡಗಳ ದುರಸ್ತಿಗೆ ಇಲಾಖೆಯಿಂದ ಬಿಡುಗಡೆ ಮಾಡಲಾದ ಮೊತ್ತವೆಷ್ಟು

ಆ) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕಟ್ಟಡಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ನೂತನ ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಮಂಜೂರಾಗಿದೆಯೇ (ವಿವರ ನೀಡುವುದು)?

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ಸಾಲಿನಲ್ಲಿ (2000–01, 2001–02 ಮತ್ತು 2002–03) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕಟ್ಟಡ ದುರಸ್ತಿಗೆ ಇಲಾಖೆಯಿಂದ ಬಿಡುಗಡೆ ಮಾಡಲಾದ ಅನುದಾನದ ವಿವರಗಳು ಈ ರೀತಿ ಇದೆ (ರೂ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾರ್ಯಕ್ರಮದ ವಿವರ	ಸರ್ಕಾರಿ ಪ್ರಾಥಮಿಕ ಶಾಲೆಗಳು			ಸರ್ಕಾರಿ ಪ್ರೌಢ ಶಾಲೆಗಳು		
		2000–01	2001–02	2002–03	2000–01	2001–02	2002–03
01	ರಾಜ್ಯವಲಯ ಯೋಜನೆಯಡಿ ದುರಸ್ತಿಗಾಗಿ	0 63	0 75	0	0 65	0	0
02	ರಾಜ್ಯವಲಯ ಯೋಜನೆಯಡಿ ಕುಡಿಯುವ ನೀರಿಗಾಗಿ	0 50	1 00	0	0 50	0	0
03	ಯೋಜನೇತರ	0 40	0 35	0 80	0	0	0 21